ಲಕ್ಷ ಮಿಾಟರ್ ಆಗಿದೆ. ಇದನ್ನೆಲ್ಲಾ ಸೀರೆ ಮತ್ತು ದೋತ್ರ ಕೊಡುವುದಕ್ಕೆ ನವ್ಮ ನಿಗಮ ಒದಗಿಸುತ್ತಿದೆ. ಒಟ್ಟು ಸೀರೆ ಮತ್ತು ದೋತ್ರ ಮಾಡುವುದರಲ್ಲಿ ೧ ಕೋಟಿ ೩ ಲಕ್ಷ ಫಲಾನುಭವಿಗಳಿಗೆ ನಾವು ಒದಗಿಸುತ್ತಾ ಇದ್ದೇವೆ. ಲಾಸ್ಟ್ ಇಯರ್ ೨೧ ಲಕ್ಷ ಸೆಟ್ಸ್ ಆಗಿದೆ. ಒಟ್ಟು ೧ ಕೋಟಿ ೩ ಲಕ್ಷದಷ್ಟು ಫಲಾನುಭವಿಗಳಿದ್ದಾರೆ, ಅವರಲ್ಲಿ ವಿತರಣೆಯಾಗಿರುವುದು ೮೧ ಲಕ್ಷ ಮಾತ್ರ. ಶಾಲಾ ಮಕ್ಕಳಿಗೆ ೧೮ ಲಕ್ಷ ಸೆಟ್ಸ್ ಅಷ್ಟು ವಿತರಣೆಯಾಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ — ನಾನು ಕೇಳಿದ್ದು ಏನೆಂದರೆ, ಈ ಯೋಜನೆಯಲ್ಲಿ ಕಡಿಮೆ ದರದ್ದು ಸೀರೆ ಮತ್ತು ಧೋತಿ ಸರ್ಕಾರ ಏನು ಹಂಚಿಕೆ ಮಾಡುತ್ತಿದೆ, ಇದರಲ್ಲಿ ವರ್ಷಕ್ಕೆ ಎಷ್ಟು ಮೀಟರ್ ಕೈಮಗ್ಗ ನಿಗಮದಿಂದ ಒದಗಿಸುತ್ತಾ ಇದ್ದೀರಿ ಎಂದು.

ಶ್ರೀ ಬಿ. ಎ. ಜೀವಿಜಯ.— ೨ ಲಕ್ಷ ಮಿಾಟರ್.

ಶ್ರೀ ಎಂ. ವೀರಪ್ಪಮೊಯ್ಲಿ.— ಇದರಲ್ಲಿ ಒಂದೊಂದು ಮೀಟರ್‌ಗೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಸಬ್ಸಿಡಿ ಎಷ್ಟು ?

ಶ್ರೀ ಬಿ. ಎ. ಜೀವಿಜಯ.— ಎರಡು ರೂಪಾಯಿ ಕೊಡುತ್ತಾ ಇರ್ತಾರೆ.

ವಿದ್ಯುತ್ ದರದ ಹೆಚ್ಚಳ

೪೮ ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಿಲು):— ಮಾನ್ಯ ಭಾರೀ ಮತ್ತು ಮಧ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿದ್ಯುಚ್ಛಕ್ತಿ ದರ ಏರಿಕೆಯಿಂದ ಸಾಲಿಯಾನ ಬರುವ ಒಟ್ಟು ಹೆಚ್ಚುವರಿ ಮೊತ್ತವೆಷ್ಟು ? (ಅಂದಾಜು ಮೊತ್ತದ ಬಗ್ಗೆ ವಿವರ ನೀಡುವುದು),

ಆ) ವ್ಯವಸಾಯ ರಂಗದಿಂದ ಈ ಮೊತ್ತ ಹೆಚ್ಚುವರಿ ಎಷ್ಟು ಬರಬಹುದು, ಇದರಿಂದ ವ್ಯವಸಾಯಗಾರರಿಗೆ ಮುಖ್ಯವಾಗಿ ಪಂಪ್‌ಸೆಟ್ ಹೊಂದಿರುವ ರೈತರಿಗೆ ತೊಂದರೆಯಾಗಿಲ್ಲವೆ, ಪಂಪ್‌ಸೆಟ್‌ಗಳಿಗೆ ಹೆಚ್ಚುವರಿಯಿಂದ ಆಗಿ ಬರುವ ಅಂದಾಜು ಮೊತ್ತವೆಷ್ಟು?

ಇ) ಎ.ಇ.ಹೆಚ್. ಮತ್ತು ಗೃಹಕೃತ್ಯ ಬಳಕೆದಾರರಿಂದ ಬರುವ ಅಂದಾಜು ಹೆಚ್ಚುವರಿ ಮೊತ್ತವೆಷ್ಟು ?

ಈ) ರಾಜ್ಯಾದ್ಯಂತ ಎಲ್ಲಾ ವರ್ಗಗಳು ಹೆಚ್ಚು ಮಾಡಿರುವ ನೀತಿಯ ಬಗ್ಗೆ ವಿರೋಧ ವ್ಯಕ್ತಪಡಿಸಿಲ್ಲವೆ ?

ಉ) ಈ ಬಗ್ಗೆ ಸರ್ಕಾರದವರು ಈ ನೀತಿಯನ್ನು ಪುನರ್ವಿಮರ್ಶಿಸುವರೆ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ರಾಜ್ಯದಲ್ಲಿ ವಿದ್ಯುಚ್ಛಕ್ತಿ ದರದ ಪುನರ್ವಿಮರ್ಶೆಯಿಂದ ೧೯೮೭–೮೮ನೇ ವರ್ಷದಲ್ಲಿ ೧೧೪.೮೭ ಕೋಟಿ ರೂ.ಗಳಷ್ಟು ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣವಾಗುವುದೆಂದು ಅಂದಾಜು ಮಾಡಲಾಗಿತ್ತು. ಇದು ೧೦,೧೮೭ ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಸರಬರಾಜು ಮಾರಾಟ ವಾಗುವುದೆಂಬ ನಿರೀಕ್ಷೆಯನ್ನು ಆಧರಿಸಿತ್ತು. ಆದರೆ ಮಳೆ ಬರದೆ ಇದ್ದಿದ್ದರಿಂದ ಜಲಾಶಯಗಳಲ್ಲಿ ನೀರಿನ ಪ್ರಮಾಣ ಬಹಳ ಕಡಿಮೆ ಇದ್ದುದರಿಂದ ಈಗ ೭೩೩೪ ಮಿ. ಯೂನಿಟ್‌ಗಳು ಮಾತ್ರ ವಾಗುವ ನಿರೀಕ್ಷೆ ಇದೆ. ಈ ಕಾರಣದಿಂದ, ದರ ಏರಿಕೆಯಿಂದ ೧೯೮೭–೮೮ರಲ್ಲಿ ಬರಬೇಕಾದ ಅಧಿಕ ಮೊತ್ತ ಸುಮಾರು ೭೨.೯೧ ಕೋಟಿ ರೂ.ಗಳೆಂದು ನಿರೀಕ್ಷಿಸಲಾಗುವುದು.

ಆ) ೧೯೮೭–೮೮ನೇ ಸಾಲಿನಲ್ಲಿ ನೀರಾವರಿ ಪಂಪುಸೆಟ್ಟು ಬಳಕೆದಾರರಿಂದ ಬರಬಹುದಾದ ಹೆಚ್ಚುವರಿ ರಾಜಸ್ವ (ರೆವಿನ್ಯೂ) ೨.೦೮ ಕೋಟಿ ರೂ.ಗಳೆಂದು ನಿರೀಕ್ಷಿಸಲಾಗಿದೆ.

ವಿದ್ಯುತ್ ದರದ ಹೆಚ್ಚಳ ಅತ್ಯಲ್ಪವಾದುದರಿಂದ ಪಂಪುಸೆಟ್ಟುದಾರರಿಗೆ ತೊಂದರೆ ಆಗುವುದಿಲ್ಲ.

ಇ) ೧೯೮೭-೮೮ನೇ ಸಾಲಿನಲ್ಲಿ ನಿರೀಕ್ಷಿಸಲಾದ ಹೆಚ್ಚುವರಿ ರಾಜಸ್ವ (ರೆವಿನ್ಯೂ)

೧) ಗೃಹ ಕೃತ್ಯ ದೀಪಗಳ ಬಳಕೆದಾರರಿಂದ — ೨.೧೭ ಕೋಟಿ ರೂ.ಗಳು.

೨) ಎ.ಇ.ಹೆಚ್. ಬಳಕೆದಾರರಿಂದ — ೨೧.೬೦ ಕೋಟಿ ರೂ.ಗಳು

ಈ) ಕೆಲವು ಸಾರ್ವಜನಿಕರಿಂದ ಪ್ರತಿಭಟನೆ ಇದೆ

ಉ) ಇಲ್ಲ.

(Hon. Member Sri T. S. Mani put the question on behalf of Sri R. Venkataramaiah)

SRI T. S. MANI.— Has the Government examined the possibility of getting by other methods nearly Rs. 114.87 crore ?

SRI LAKSHMINARASIMMAIAH.— No. It is not possible.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ರಘುಪತಿ.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕರ್ನಾಟಕ ಮಿನರಲ್ ಫ್ಯಾಕ್ಟರಿಗೆ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ

೬೩೩. ಶ್ರೀ ಬಿ. ರಾಮದಾಸ್ (ಹೊಸದುರ್ಗ) —ಭಾರೀ ಹಾಗೂ ಮಧ್ಯಮ ಕೈಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸದುರ್ಗ ಕ್ಷೇತ್ರದಲ್ಲಿ ಮತ್ತೊಂದು ಕರ್ನಾಟಕ ಮಿನರಲ್ಸ್ ಕಾರ್ಖಾನೆಗೆ ವಿದ್ಯುಚ್ಛಕ್ತಿ ಮಂಡಳಿಯವರು ತಾತ್ಕಾಲಿಕವಾಗಿ ಕೊಟ್ಟಿರುವ ವಿದ್ಯುತ್ ಪ್ರಮಾಣವೆಷ್ಟು ?

ಆ) ವಿದ್ಯುಚ್ಛಕ್ತಿ ಮಂಡಳಿಯವರು ಕೊಟ್ಟಿರುವ ವಿದ್ಯುಚ್ಛಕ್ತಿಯ ವಿಷಯ ಗಮನಕ್ಕೆ ತರಲಾಗಿದೆಯೇ ?

ಇ) ವಿದ್ಯುಚ್ಛಕ್ತಿ ಸರಬರಾಜು ಮಾಡಲಾದ ಹೆಚ್ಚುವರಿ ಲೋಡು ಇರಬೇಕು ಎಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಇದನ್ನು ಪರಿಶೀಲಿಸಿದಾಗ ಸಿ.ಆರ್.ನಲ್ಲಿ ಲೋಡ್ ಇದೆಯೇ ?

ಉ) ಹಾಗಿದ್ದಲ್ಲಿ ಸದರಿ ಸಿ.ಆರ್.ನಲ್ಲಿ ಈ ಬಗ್ಗೆ ಪ್ರತ್ಯೇಕವಾಗಿ ಮೀಟರನ್ನು ಅಳವಡಿಸಿದ್ದಾರೆಯೆ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಹೊಸದುರ್ಗ ಕ್ಷೇತ್ರದಲ್ಲಿ ಕರ್ನಾಟಕ ಮಿನರಲ್ಸ್‌ರವರ ಒಂದೇ ಒಂದು ಕಾರ್ಖಾನೆಯಿದೆ. ಇದು ಮಾತೋಡು ಎಂಬಲ್ಲಿ ಸ್ಥಾಪಿತವಾಗಿದೆ. ಈ ಕಾರ್ಖಾನೆಗೆ ಕರ್ನಾಟಕ ವಿದ್ಯುತ್ ಮಂಡಳಿಯವರು ಕಾರ್ಖಾನೆಯವರ ಮನವಿ ಮೇರೆಗೆ ೧೯೮೭ ಆಗಸ್ಟ್ ತಿಂಗಳಿಂದ ೬ ತಿಂಗಳ ಅವಧಿಗೆ ಅವರ ಪ್ರಸ್ತುತ ನಿಗದಿತ ಡಿಮ್ಯಾಂಡ್ ಮೇಲೆ ೧೨೦೦ ಕೆ.ವಿ.ಎ.ಹೆಚ್ಚುವರಿ ಡಿಮ್ಯಾಂಡ್‌ನ್ನು ತಾತ್ಕಾಲಿಕವಾಗಿ ಮಂಜೂರು ಮಾಡಿದ್ದಾರೆ. ಇದನ್ನು ಸದರಿ ಕಾರ್ಖಾನೆಯವರು ಎಂ.ಸಿ ಎಫ್.ರವರಿಂದ ಖರೀದಿಸಿರುವ ಮಾಹೆಯಾನ ೧೦ ಲಕ್ಷ ಯೂನಿಟ್ಟುಗಳನ್ನು ಬಳಸಲು ಅನುಕೂಲವಾಗಲು ಮಾತ್ರ ಮಂಜೂರು ಮಾಡಲಾಗಿದೆ.

ಆ) ತರಲಾಗಿದೆ.